| |
|---|
| **Deposition Sheets (RP.No.57) Form No.4** |

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 457/2024**

ಪಿಡ್ಯೂಃ 4 ಸಿಡ್ಲ್ಯೂಃ 4

ಸಾಕ್ಷಿದಾರನ ಹೆಸರು : ಸುಮಿತ್

ತಂದೆಯ ಹೆಸರು : ನಾಗಚಂದ್ರ

ಪ್ರಾಯ : 40 ವರ್ಷ

ಉದ್ಯೋಗ : ಕೃಷಿ

ವಾಸ : ಮುಡಾರು

ದಿನಾಂಕ 19.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿಯನ್ನು ನೋಡಿ ಗುರುತಿಸಿದ್ದೇನೆ.

ಚಾಸಾ-1 ರವರ ಪರಿಚಯ ಇದೆ. ಅವರು ನಮ್ಮ ಸಂಬಂಧಿಕರು. ಚಾಸಾ-2, 3 ರವರ ಪರಿಚಯ ಇದೆ ಅವರು ನಮ್ಮ ಊರಿನವರು.

ದಿಃ28.10.2023 ರಂದು ಬೆಳಿಗ್ಗೆ 6.15 ಗಂಟೆಗೆ ವಾಕಿಂಗ್ ಹೋಗುವಾಗ ಆರೋಪಿ ಆತನ ಟಿಪ್ಪರ್ ವಾಹನದಲ್ಲಿ ದಿಡಿಂಬಿರಿಯಲ್ಲಿರುವ 5 ಸೆಂಟ್ಸ್‌ನ 9 ನೇ ಕ್ರಾಸ್ ನಿಂದ ಹೊರಗೆ ಬಂದು 8 ನೇ ಕ್ರಾಸ್ ಗೆ ಅತೀವೇಗ ದಿಂದ ಚಾಲನೆ ಮಾಡಿಕೊಂಡು ಬಂದು 8 ನೇ ಕ್ರಾಸ್ ನಲ್ಲಿ ಮಲಗಿದ್ದ ದನದ ಕಾಲಿನ ಟಿಪ್ಪರ್ ನ ಟಯರ್ ಹತ್ತಿಸಿರುತ್ತಾರೆ. ಅಪಘಾತದ ಪರಿಣಾಮ ದನದ 2 ಕಾಲಿಗೆ ಪೆಟ್ಟಾಗಿರುತ್ತದೆ. ಷದ್ರಿ ದನ ಚಾಸಾ-1 ರವರದಾಗಿರುತ್ತದೆ. ನಂತರ ಷದ್ರಿ ದನವನ್ನು ಕಾರ್ಕಳ ಪಶು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ದಿಃ31.10.2023 ರಂದು ಬೆಳಿಗ್ಗೆ ದನ ಮೃತಪಟ್ಟಿರುತ್ತದೆ. ಈ ಅಪಘಾತಕ್ಕೆ ಆರೋಪಿಯ ಅತೀವೇಗ ಹಾಗೂ ಅಜಾಗರೂಕತೆಯ ಚಾಲನೆಯೇ ಕಾರಣ ಆಗಿರುತ್ತದೆ. ಈ ಬಗ್ಗೆ ದೂರು ದಾಖಲಾದ ವಿಚಾರ ಗೊತ್ತಿದೆ.

2. ನಂತರ ದಿ:29.10.2023 ರಂದು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನಮ್ಮ ಜೊತೆ ಚಾಸಾ-1 ಮತ್ತು 3 ರವರು ಇದ್ದರು. ಠಾಣೆಯಲ್ಲಿ ಸದ್ರಿ ಟಿಪ್ಪರ್ ನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಈಗ ನಾನು ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆ ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಈಗ ನಾನು ನೋಡಿದ ನಿಪಿ-6 , 7 ಭಾವಚಿತ್ರದಲ್ಲಿರುವ ಟಿಪ್ಪರನ್ನು ನೋಡಿ ಗುರುತಿಸಿದ್ದೇನೆ.

3. ಅದೇ ದಿನ ಸ್ಥಳಕ್ಕೆ ಭೇಟಿ ನೀಡಿ ಪೊಲೀಸರಿಗೆ ಚಾಸಾ-1 ರವರು ಸ್ಥಳವನ್ನು ತೋರಿಸಿಕೊಟ್ಟಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-1, 3 ಇದ್ದರು. ಆ ಸಮಯದಲ್ಲಿ ಪೊಲೀಸರು ಸ್ಥಳದಲ್ಲಿ ಮಹಜರು ಮತ್ತು ನಕ್ಷೆಯನ್ನು ಮಾಡಿರುತ್ತಾರೆ ಮತ್ತು ನಮ್ಮ ಸಹಿಯನ್ನು ಪಡೆದಿರುತ್ತಾರೆ ಮತ್ತು ಭಾವಚಿತ್ರ ತೆಗೆದಿರುತ್ತಾರೆ. ಈಗ ನಾನು ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆ ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಈಗ ನಾನು ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆ ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಈಗ ನಾನು ನೋಡಿದ ನಿಪಿ-4 ಭಾವಚಿತ್ರವನ್ನು ನೋಡಿ ಗುರುತಿಸಿದ್ದೇನೆ.

4. ಈ ಬಗ್ಗೆ ಪೊಲೀಸರು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಆರ್ ಎಸ್ ವಕೀಲರು ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ